ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ

ನಾಯಾಲಯ, ಹಿರಿಯೂರು

**ಸಿ.ಸಿ. ನಂ. 1002 / 2025**

| ಫಿರ್ಯಾದುದಾರರುಃ | ಆರೋಪಿತರುಃ |
|---|---|
| ಸರ್ಕಾರದ ಪರವಾಗಿ | ಸುರೇಶ ಬಿನ್ ಗುಡ್ಡದರಂಗಪ್ಪ, |
| ಐಮಂಗಲ ಪೊಲೀಸ್ ಠಾಣೆ | ವಯಸ್ಸು ಸುಮಾರು 36, |
| | ಆರೋಪಿಯ ವಾಸ ಕಳವಿಬಾಗಿ ಗ್ರಾಮ, |
| | ಹಿರಿಯೂರು ತಾಲ್ಲೂಕು. |

## ದೋಷಾರೋಪಣೆ

ಶ್ರೀ. ಶ್ರೀಧರ ಹೆಚ್.ಡಿ. ಬಿ.ಎ, ಎಲ್.ಎಲ್.ಬಿ., ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ, ಎಫ್ ಸಿ ಹಿರಿಯೂರು ಆದ ನಾನು 1 ಮತ್ತು 2 ನೇ ಆರೋಪಿತರಾದ ನಿಮ್ಮಗಳ ಮೇಲೆ ಈ ಕೆಳಕಂಡಂತೆ ಆಪಾದಿಸುತ್ತೇನೆಃ-

ದಿನಾಂಕ.05.04.2025 ರಂದು 04.00 ಪಿ.ಎಂ. ಸಮಯದಲ್ಲಿ ಹಿರಿಯೂರು ತಾಲ್ಲೂಕು ಕಳವಿಭಾಗಿ ಗ್ರಾಮದ ಲಕ್ಷ್ಮಮ್ಮ ದೇವಸ್ಥಾನದ ಬಳಿ ಸಾಕ್ಷಿ-1 ಮತ್ತು ಸಾಕ್ಷಿ-2 ರವರು ಬೆಂಗಳೂರಿಗೆ ಹೋಗುತ್ತಿರುವಾಗ 1 ಮತ್ತು 2 ನೇ ಆರೋಪಿಯತರಾದ ನೀವು ಏಕಾಏಕಿ ಬಂದು ಸೂಳೇ ಮಗನೆ ನಿನಗೆ ಮನೆ ಕಟ್ಟಲು ಏಕೆ ಖಾಲಿ ಜಾಗ ಕೊಡಬೇಕು ಎಂದು ಅವಾಚ್ಯ ಶಬ್ದಗಳಿಂದ ಬೈದಾಡುವ ಮೂಲಕ ನೀವು **ಭಾರತೀಯ ನ್ಯಾಯಾ ಸಂಹಿತೆ ಕಲಂ 352 ಸಹವಾಚಕ 3(5) ರನ್ವಯ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಒಂದುಗೂಡಿ, 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡುವ ಮೂಲಕ **ಭಾರತೀಯ ನ್ಯಾಯಾ ಸಂಹಿತೆ ಕಲಂ 118(1) ಸಹವಾಚಕ 3(5) ರನ್ವಯ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಒಂದುಗೂಡಿ, ಗಲಾಟೆ ಬಿಡಿಸಲು ಬಂದ ಸಾಕ್ಷಿ-2 ರವರಿಗೆ 1 ಮತ್ತು 2 ನೇ ಆರೋಪಿತರಾದ ನೀವು ಹಲ್ಲೆ ಮಾಡಿ ಮತ್ತು ಸಾಕ್ಷಿ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯವುಂಟು ಮಾಡುವ ಮೂಲಕ **ಭಾರತೀಯ ನ್ಯಾಯಾ ಸಂಹಿತೆ ಕಲಂ 115(2) ಸಹವಾಚಕ 3(5) ರನ್ವಯ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಈ ಮೇಲಿನ ಅಪರಾಧಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು.

ದಿನಾಂಕಃ 20.12.2025
ಸ್ಥಳಃ ಹಿರಿಯೂರು

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ, ಎಫ್ ಸಿ, ಹಿರಿಯೂರು

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ
ನಾಯಾಲಯ, ಹಿರಿಯೂರು

**ಸಿ.ಸಿ. ನಂ. 1002 / 2025**

| ಫಿರ್ಯಾದುದಾರರುಃ | ಆರೋಪಿತರುಃ |
| --- | --- |
| ಸರ್ಕಾರದ ಪರವಾಗಿ | 1. ಸುರೇಶ ಬಿನ್ ಗುಡ್ಡದರಂಗಪ್ಪ, |
| ಐಮಂಗಲ ಪೊಲೀಸ್ ಠಾಣೆ | ವಯಸ್ಸು ಸುಮಾರು 36, |

ಪ್ರಃ ಈಗ ಓದಿ ಹೇಳಿದ ದೋಷಾರೋಪಣ ತಿಳಿಯಿತೇ?

1 ನೇ ಆರೋಪಿ ಉತ್ತರ

ಪ್ರಃ ಮೇಲೆ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

1 ನೇ ಆರೋಪಿ ಉತ್ತರ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿದ ನಂತರ ಆತನು ಅರ್ಥ ಮಾಡಿಕೊಂಡು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆ ಎಂದು ದೃಡೀಕರಿಸಿರುತ್ತೇನೆ)

ಆರೋಪಿಯ ಸಹಿಃ

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ, ಎಫ್ ಸಿ, ಹಿರಿಯೂರು

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ

ನಾಯಾಲಯ, ಹಿರಿಯೂರು

**ಸಿ.ಸಿ. ನಂ. 1002 / 2025**

| ಫಿರ್ಯಾದುದಾರರುಃ | ಆರೋಪಿತರುಃ |
|---|---|
| ಸರ್ಕಾರದ ಪರವಾಗಿ | 2. ತಿಪ್ಪೇಸ್ವಾಮಿ ಬಿನ್ ಗುಡ್ಡದರಂಗಪ್ಪ, |
| ಐಮಂಗಲ ಪೊಲೀಸ್ ಠಾಣೆ | ವಯಸ್ಸು ಸುಮಾರು 31, |

ಪ್ರಃ ಈಗ ಓದಿ ಹೇಳಿದ ದೋಷಾರೋಪಣ ತಿಳಿಯಿತೇ?

2 ನೇ ಆರೋಪಿ ಉತ್ತರ

ಪ್ರಃ ಮೇಲೆ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

2 ನೇ ಆರೋಪಿ ಉತ್ತರ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿದ ನಂತರ ಆತನು ಅರ್ಥ ಮಾಡಿಕೊಂಡು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆ ಎಂದು ದೃಡೀಕರಿಸಿರುತ್ತೇನೆ)

ಆರೋಪಿಯ ಸಹಿಃ

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ, ಎಫ್ ಸಿ, ಹಿರಿಯೂರು